ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ

# 2021-22ನೇ ಸಾಲಿನ ಜಿಲ್ಲಾವಲಯ (ಜಿಲ್ಲಾ /ತಾಲ್ಲೂಕು ಪಂಚಾಯತ್) ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಮಾರ್ಗಸೂಚಿ.



**ಕರ್ನಾಟಕ ಸರ್ಕಾರ**
**ರೇಷ್ಮೆ ಇಲಾಖೆ**

ಸಂ: ಯೋಜನೆ/ಪಿಎಸ್3/ಜಿಪಂ–ತಾಪಂ/ಮಾಸೂ/72/20–21

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರ ಕಚೇರಿ
ಬೆಂಗಳೂರು. ದಿನಾಂಕ:05.11.2020

**ಸುತ್ತೋಲೆ**

ವಿಷಯ: 2021–22ನೇ ಸಾಲಿನ ಜಿಲ್ಲಾವಲಯ (ಜಿಲ್ಲಾ/ ತಾಲ್ಲೂಕು ಪಂಚಾಯತ್) ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಮಾರ್ಗಸೂಚಿ.

2021–22ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಯೋಜನೆಗಳಡಿಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

## I. ಜಿಲ್ಲಾ ಪಂಚಾಯತ್ ಯೋಜನೆಗಳು:

### ಅ. ರೇಷ್ಮೆ ಬೆಳೆಗಾರರಿಗೆ ಸಹಾಯಧನ ಲೆಕ್ಕಶೀರ್ಷಿಕೆ 2851–00–104–0–30

2021–22ನೇ ಸಾಲಿನ ಆಯವ್ಯಯದಲ್ಲಿ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತ್ /ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳನ್ನು ಈ ಕೆಳಕಂಡ ಮಾರ್ಗಸೂಚಿಯಂತೆ ಅನುಷ್ಠಾನಗೊಳಿಸುವುದು, ಶೇ.33ರಷ್ಟು ಆಯವ್ಯಯವನ್ನು ಮಹಿಳಾ ಫಲಾನುಭವಿಗಳಿಗೆ, ಶೇ.17.15ರಷ್ಟನ್ನು ಪರಿಶಿಷ್ಠ ಜಾತಿ, ಶೇ.6.95ರಷ್ಟು ಪರಿಶಿಷ್ಠ ಪಂಗಡದವರಿಗೆ ಹಾಗೂ ಶೇ.15ರಷ್ಟು ಅಲ್ಪ ಸಂಖ್ಯಾತ ವರ್ಗದವರಿಗೆ ಮೀಸಲಾಗಿರಿಸಿ ಕಾರ್ಯಕ್ರಮಗಳನ್ನು ಅನುಷ್ಟಾನಮಾಡುವುದು.

ಜಿಲ್ಲಾ ಪಂಚಾಯತ್ ಯೋಜನೆಯಡಿಯಲ್ಲಿ ಒದಗಿಸಿರುವ ಒಟ್ಟು ಅನುದಾನದಲ್ಲಿ ಅವಶ್ಯವಿರುವ ಅನುದಾನವನ್ನು ರೇಷ್ಮೆ ವಸ್ತು ಪ್ರದರ್ಶನ/ಕಾರ್ಯಾಗಾರ/ವಿಚಾರ ಸಂಕಿರಣ, ಅದೇ ರೀತಿ ತಾಲ್ಲೂಕು ಪಂಚಾಯತ್ ಯೋಜನೆಯಡಿಯಲ್ಲಿ ಒದಗಿಸಿರುವ ಒಟ್ಟು ಅನುದಾನದಲ್ಲಿ ಅವಶ್ಯವಿರುವ ಅನುದಾನವನ್ನು ತಾಂತ್ರಿಕ ಸಲಹೆಗಳು, ಪ್ರದರ್ಶನಗಳು, ಪ್ರಚಾರ, ಶ್ರವಣ ಮತ್ತು ದೃಶ್ಯ ಹಾಗೂ ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರಗಳ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಹಣ ಒದಗಿಸಿಕೊಂಡು, ಉಳಿಕೆಯಾಗುವ ಅನುದಾನದಲ್ಲಿ MGNREGA ಮಾನದಂಡಗಳ ಅರ್ಹತೆ ಮೀರಿದ ರೇಷ್ಮೆ ಬೆಳೆಗಾರರಿಗೆ ಹಿಪ್ಪುನೇರಳೆ ನಾಟಿ ಮತ್ತು ಹಿಪ್ಪುನೇರಳೆ ನರ್ಸರಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಹಾಗೂ ರೋಗ ನಿಯಂತ್ರಣ ಕಾರ್ಯಕ್ರಮಗಳಿಗೆ ಕ್ರಿಯಾಯೋಜನೆ ತಯಾರಿಸುವುದು. ವಿಭಾಗೀಯ ರೇಷ್ಮೆ ಜಂಟಿ ನಿರ್ದೇಶಕರವರಿಂದ ತಾಂತ್ರಿಕ ಅನುಮೋದನೆಯನ್ನು ಹಾಗೂ ಜಿಲ್ಲಾ ಪಂಚಾಯತ್‌ವತಿಯಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸೂಚಿಸಿದೆ.

**ಫಲಾನುಭವಿಗಳ ಆಯ್ಕೆ ಮತ್ತು ಕ್ರಿಯಾಯೋಜನೆ ತಯಾರಿಕೆ :**

- ಹಿಪ್ಪುನೇರಳೆ ನಾಟಿ / ಹಿಪ್ಪುನೇರಳೆ ನರ್ಸರಿ ಮಾಡುವ ಫಲಾನುಭವಿಗಳ ಆಯ್ಕೆಯನ್ನು ಏಪ್ರಿಲ್ – ಮೇ 2021ರ ಒಳಗೆ ಮಾಡುವುದು.
- ಆಯ್ಕೆ ಮಾಡಿದ ಫಲಾನುಭವಿಗಳ ಪಟ್ಟಿಯನ್ನು ಸಂಬಂಧಿಸಿದ ರೇಷ್ಮೆ ಜಂಟಿ ನಿರ್ದೇಶಕರುಗಳಿಂದ ಅನುಮೋದನೆ ಪಡೆಯುವುದು.
- ಅನುಮೋದಿತ ಪಟ್ಟಿಯ ಒಂದು ಪ್ರತಿಯನ್ನು ಯೋಜನಾ ಶಾಖೆ, ರೇಷ್ಮೆ ನಿರ್ದೇಶನಾಲಯಕ್ಕೆ ಸಲ್ಲಿಸುವುದು.
- ಹಿಪ್ಪುನೇರಳೆ ನಾಟಿ ಕಾರ್ಯಕ್ರಮವನ್ನು ಸೆಪ್ಟೆಂಬರ್ – 2021ರ ಮಾಹೆಯ ಒಳಗಾಗಿ ಪೂರ್ಣಗೊಳಿಸುವುದು.
- ಹಿಪ್ಪುನೇರಳೆ ನರ್ಸರಿ ಬೆಳೆಸುವ ರೈತರು, ಹಿಪ್ಪುನೇರಳೆ ಸಸಿ ವಿತರಿಸುವ ಕುರಿತು ವಿತರಣಾ ಪಟ್ಟಿಯನ್ನು ಸಲ್ಲಿಸುವುದು.
- ಹಿಪ್ಪುನೇರಳೆ ನಾಟಿಯನ್ನು ನೇರವಾಗಿ ಹಿಪ್ಪುನೇರಳೆ ಕಡ್ಡಿ ನಾಟಿ ಮಾಡುವ / ನರ್ಸರಿಯಿಂದ ಸಸಿ ಪಡೆದು ನಾಟಿ ಮಾಡುವ ಕುರಿತು, ಬಿತ್ತನೆ ಕಡ್ಡಿ/ನರ್ಸರಿ ಸಸಿ ಪಡೆದ ಮೂಲದ ವಿವರ ಸಹ ಸಲ್ಲಿಸುವುದು.
- ರೋಗ ನಿಯಂತ್ರಣ ಕಾರ್ಯಕ್ರಮಕ್ಕೆ ಋತುವಿಗೆ ಅನುಗುಣವಾಗಿ ಅವಶ್ಯವಿರುವ ಸಿಂಪರಕಗಳನ್ನು ಮಾತ್ರ ಪಡೆಯುವುದು. ವ್ಯಾಪ್ತಿಯಲ್ಲಿ ಬರುವ ರೇಷ್ಮೆ ಬೆಳೆಗಾರರು ಮತ್ತು ಹಿಪ್ಪುನೇರಳೆ ಕ್ಷೇತ್ರವನ್ನು ಗಮನದಲ್ಲಿ ಇರಿಸಿಕೊಂಡು ಫಲಾನುಭವಿಗಳನ್ನು ಆಯ್ಕೆ ಮಾಡಿ ಸಂಬಂಧಿಸಿದ ಜಂಟಿ ನಿರ್ದೇಶಕರಿಂದ ಅನುಮೋದನೆ ಪಡೆಯುವುದು.
- ರೋಗ ನಿಯಂತ್ರಣಕ್ಕಾಗಿ ಪಡೆದ ಸಿಂಪರಕಗಳನ್ನು ದಾಸ್ತಾನು ವಹಿಯಲ್ಲಿ ದಾಖಲಿಸುವುದು ಮತ್ತು ವಿತರಣೆ ಮಾಡಿದ ನಂತರ ವಿತರಣಾ ವಹಿಯಲ್ಲಿಯೂ ಸಹ ದಾಖಲಿಸುವುದು.
- ಅವಧಿ ಮೀರಿದ ಸೋಂಕು ನಿವಾರಕಗಳು/ಸಿಂಪರಕಗಳನ್ನು ಯಾವುದೇ ಕಾರಣಕ್ಕೂ ಪಡೆಯಬಾರದ ಹಾಗೂ ವಿತರಿಸಬಾರದು.

## 1. ಹಿಪ್ಪುನೇರಳೆ ನರ್ಸರಿ:

ಹಿಪ್ಪುನೇರಳೆ ತೋಟ ಸ್ಥಾಪನೆಗೆ ಬಿತ್ತನೆ ಕಡ್ಡಿಗಳಿಗಿಂತ ನರ್ಸರಿಯಲ್ಲಿ ಬೆಳೆಸಿದ ಸಸಿಗಳು ಸದೃಢವಾಗಿ ಬೇರುಬಿಟ್ಟಿದ್ದು, ಆರೋಗ್ಯಕರವಾಗಿ 4 ತಿಂಗಳವರೆಗೆ ಬೆಳೆದ ಹಿಪ್ಪುನೇರಳೆ ಸಸಿ ನಾಟಿ ಮಾಡುವುದರಿಂದ ಹಿಪ್ಪುನೇರಳೆ ತೋಟ ಸ್ಥಾಪನೆಯಲ್ಲಿ ತಪ್ಪು ಗುಳಿಗಳಾಗುವುದಿಲ್ಲ, ನರ್ಸರಿ ಬೆಳೆಸುವುದು ಒಂದು ಲಾಭದಾಯಕ ಕಸುಬಾಗಿರುವುದರಿಂದ, ವಾಣಿಜ್ಯ ಪ್ರಮಾಣದಲ್ಲಿ ಸಸಿ ಬೆಳೆಸುವುದನ್ನು ಪ್ರೋತ್ಸಾಹಿಸಲು ಸಹಾಯ ನೀಡಲಾಗುತ್ತದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಘಟಕ ದರ | ಸಹಾಯಧನ | |
|---|---|---|---|---|
| | | | ಸಾಮಾನ್ಯ | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ |
| 1 | ಹಿಪ್ಪುನೇರಳೆ ನರ್ಸರಿ (ಎಕರೆ) | 1.50 | 1.125(75%) | 1.35(90%) |

- ತೋಟದಲ್ಲಿ ಒಂದೇ ಮಟ್ಟದ ಸಸಿಗಳು ಸಮ ಪ್ರಮಾಣದಲ್ಲಿ ಬೆಳೆದು ಉತ್ಕೃಷ್ಟ ಸೊಪ್ಪು ನೀಡುತ್ತವೆ.
- ಬಿತ್ತನೆ ಕಡ್ಡಿಗಳಿಗಿಂತ ನರ್ಸರಿಯಲ್ಲಿ ಬೆಳೆಸಿದ ಸಸಿಗಳ ಬದುಕುವ ಸಾಮರ್ಥ್ಯತೆ ಹೆಚ್ಚಿರುತ್ತದೆ.
- ಸಸಿಯಿಂದ ಸ್ಥಾಪಿತವಾಗುವ ತೋಟಕ್ಕೆ ಅತೀ ಕಡಿಮೆ ಅವಧಿಯಲ್ಲಿ ಬೆಳೆಯಿಟ್ಟು ಗೂಡು ಬೆಳೆಯಬಹುದು.
- ತೋಟದಲ್ಲಿನ ತಪ್ಪುಗುಳಿ ನಿವಾರಿಸಿ ಉತ್ಪಾದಕತೆ ಹೆಚ್ಚಿಸಲು ಸಸಿಗಳನ್ನು ಆಶ್ರಯಿಸಬಹುದು.
- ಸಮೃದ್ಧ ನೀರಾವರಿಯುಳ್ಳ ಒಂದು ಎಕರೆ ಜಮೀನಿನಲ್ಲಿ ಹೆಚ್ಚು ಇಳುವರಿ ಹಿಪ್ಪುನೇರಳೆ ತಳಿಯ 1,28,000 ಸಸಿಗಳನ್ನು 4 ತಿಂಗಳವರೆಗೆ ಬೆಳಸಿ ಕನಿಷ್ಠ 25 ಎಕರೆ ಹೊಸದಾಗಿ ನಾಟಿ ಮಾಡುವ ಪ್ರದೇಶಕ್ಕೆ ಒದಗಿಸಬಹುದು.
- ಒಂದು ಎಕರೆಯಲ್ಲಿ 1,28,000 ಸಸಿಗಳನ್ನು 4 ತಿಂಗಳವರೆಗೆ ಬೆಳೆಸಿರಬೇಕು.

1. ಸ್ವಂತ / ಗುತ್ತಿಗೆ ಪಡೆದ ಸಮೃದ್ಧ ನೀರಾವರಿ ಸೌಲಭ್ಯವುಳ್ಳ ಕನಿಷ್ಠ ಒಂದು ಎಕರೆ ಸಮತಟ್ಟಾದ, ಎತ್ತರಕ್ಕಿರುವ, ಫಲವತ್ತಾದ ಜಮೀನು ಉಳ್ಳವರು ಈ ಸಹಾಯ ಪಡೆಯಬಹುದು.
2. ಈ ಜಮೀನನ್ನು ಇಲಾಖೆಯ ಅಧಿಕಾರಿಗಳು ವೀಕ್ಷಿಸಿ ದೃಢೀಕರಿಸಿರಬೇಕು.
3. ಮಣ್ಣು ಪರೀಕ್ಷೆಯನ್ನು ಸರ್ಕಾರಿ ಮಣ್ಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಮಾಡಿಸಬೇಕು.
4. ಸಸಿಗಳನ್ನು ವರ್ಷಃಪೂರ್ತಿ ಬೆಳಸಬಹುದಾಗಿದ್ದರೂ, ನಾಟಿ ಕಾಲಕ್ಕೆ 4 ತಿಂಗಳು ಮುಂಚಿತವಾಗಿ ಬೆಳೆಸುವುದು ಸೂಕ್ತ. ಅಂದರೆ ಫೆಬ್ರವರಿ–ಏಪ್ರಿಲ್ ತಿಂಗಳುಗಳಲ್ಲಿ ಬೆಳೆಸಲು ಕ್ರಮವಹಿಸುವುದು. ಜೂನ್–ಆಗಸ್ಟ್‌ಗೆ ಸಸಿಗಳನ್ನು ನಾಟಿ ಮಾಡಲು ವಿತರಿಸುವುದು.
5. ಸಸಿಗಳನ್ನು ಏರುಮಡಿಗಳಲ್ಲಿ ಅಥವಾ 23–25.ಸೆಂ.ಮಿ ಎತ್ತರ ಮತ್ತು 10–15 ಸೆಂ.ಮಿ ವ್ಯಾಸವುಳ್ಳ ಪಾಲಿಥೀನ್ ಬ್ಯಾಗ್‌ಗಳಲ್ಲಿ ಮಣ್ಣು, ಸಾವಯವ ಗೊಬ್ಬರ, ಮರಳುಗಳ ಮಿಶ್ರಣದಿಂದ ತುಂಬಿಸಿ ಬೆಳೆಸಬಹುದಾಗಿದೆ.
6. ಸುಧಾರಿತ ಹೆಚ್ಚು ಇಳುವರಿ ನೀಡುವ ಬಿತ್ತನೆ ಕಡ್ಡಿಗಳನ್ನು ಸಸಿ ಬೆಳೆಸಲು ಉಪಯೋಗಿಸಬೇಕು.
7. ಒಬ್ಬ ರೈತ ಗರಿಷ್ಠ 1.00 ಎಕರೆವರೆಗೆ ಸಸಿ ಬೆಳೆಸಿ ಸೌಲಭ್ಯ ಪಡೆಯಬಹುದಾಗಿದೆ.
8. ಸಹಾಯಧನ ಪಡೆಯುವ ಫಲಾನುಭವಿಯೊಂದಿಗೆ ಇಲಾಖಾ ಸಿಬ್ಬಂದಿ / ಅಧಿಕಾರಿಗಳು ಕಿಸಾನ್ ನರ್ಸರಿ ಮುಂದೆ ನಿಂತಿರುವ ಛಾಯಾಚಿತ್ರ ತೆಗೆಯಿಸಿ ಸಲ್ಲಿಸಬೇಕು.
9. ಸಹಾಯಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ಕೆ2 ಮುಖಾಂತರ ವಿತರಿಸುವುದು. ಬ್ಯಾಂಕ್/ಸಂಘ ಸಂಸ್ಥೆಗಳಿಂದ ಸಾಲ ಪಡೆದಿದ್ದಲ್ಲಿ ಸಹಾಯಧನವನ್ನು ಬ್ಯಾಂಕಿಗೆ ಜಮಾ ಮಾಡುವುದು.
10. ಇಲಾಖೆಯು ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿ, ಮಹಜರ್, ಶಿಫಾರಸ್ಸು / ದೃಢೀಕರಣಗಳಿರಬೇಕು.

## 2. ಹಿಪ್ಪುನೇರಳೆ ನಾಟಿ ಮಾಡುವ ರೇಷ್ಮೆ ಕೃಷಿಕರಿಗೆ ಸಹಾಯಧನ :

ಯಶಸ್ವಿ ಗೂಡು ಉತ್ಪಾದನೆಗೆ ಹಿಪ್ಪುನೇರಳೆ ಗುಣಮಟ್ಟ ಮುಖ್ಯವಾದ ಅಂಶ. ಈ ನಿಟ್ಟಿನಲ್ಲಿ ಹಿಪ್ಪುನೇರಳೆ ತೋಟ ನಿರ್ವಹಣೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ನೀರಾವರಿ ಸೌಲಭ್ಯವಿರುವ ರೈತರನ್ನು / ಕೃಷಿಕರನ್ನು ಆಯ್ಕೆ ಮಾಡಿ ಹಿಪ್ಪುನೇರಳೆ ನಾಟಿ ಮಾಡುವ ತೋಟ ವಿಸ್ತರಿಸುವ / ಸಾಂಪ್ರದಾಯಿಕ ಹಿಪ್ಪುನೇರಳೆ ತಳಿ ತೆಗೆದು ಹೆಚ್ಚಿನ ಇಳುವರಿ ನೀಡುವ ಹೊಸ ತಳಿಗೆ ಬದಲಾಯಿಸುವ ರೇಷ್ಮೆ ಕೃಷಿಕರಿಗೆ ಸಹಾಯಧನ ಒದಗಿಸಲಾಗುವುದು. ಒಬ್ಬ ಫಲಾನುಭವಿ ಗರಿಷ್ಠ 2.00 ಹೆಕ್ಟೇರ್‌ವರೆಗೆ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ.

1. ಕ್ಷೇತ್ರಮಟ್ಟದ ಅಧಿಕಾರಿ/ಸಿಬ್ಬಂದಿ ಇಂತಹ ರೈತರ ತೋಟ ಹಿಪ್ಪುನೇರಳೆ ನಾಟಿ ಪ್ರಾರಂಭದಿಂದ ಹಿಪ್ಪುನೇರಳೆ ನಾಟಿ ಕಾರ್ಯ ಪೂರೈಸುವವರೆಗೂ ನಿರಂತರವಾಗಿ ಭೇಟಿ ನೀಡಿ ತಾಂತ್ರಿಕ ಮಾಹಿತಿ ನೀಡುತ್ತಿರಬೇಕು ಹಾಗೂ ಈ ಕುರಿತು ತಮ್ಮ ದಿನಚರಿಯಲ್ಲಿ ದಾಖಲಿಸಿರಬೇಕು.
2. ಫಲಾಪೇಕ್ಷಿ ರೈತರು ರೂ.50.00ರ ಮೌಲ್ಯದ ಛಾಪಾ ಕಾಗದದಲ್ಲಿ ಕನಿಷ್ಠ 3 ವರ್ಷಗಳವರೆಗೆ ರೇಷ್ಮೆ ಕೃಷಿ ಮುಂದುವರೆಸಿಕೊಂಡು ಹೋಗುವ ಬಗ್ಗೆ ಹಾಗೂ ವಾರ್ಷಿಕ ಕನಿಷ್ಠ 2 ದ್ವಿತಳಿ ಬೆಳೆ ಮಾಡುವ ಕುರಿತು ಮುಚ್ಚಳಿಕೆಯನ್ನು ಬರೆದು ಕೊಡಬೇಕು.
3. ನಾಟಿಗೆ ಇರುವ ಅಂತರ ಆಧರಿಸಿ per unit area ದಲ್ಲಿರಬೇಕಾದ ಕನಿಷ್ಠ ಹಿಪ್ಪುನೇರಳೆ ಸಸಿಗಳ ಸಂಖ್ಯೆ ನಿಗದಿಪಡಿಸಬಹುದು ಹಾಗೂ ಹಿಪ್ಪುನೇರಳೆ ಮರಗಳನ್ನು ಬೆಳೆಸಿದ್ದಲ್ಲಿ ಒಂದು ಎಕರೆ ಅಥವಾ 300 ಹಿಪ್ಪುನೇರಳೆ ಮರಗಳಿಗೆ Prorata ಅಧರಿಸಿ ಪ್ರೋತ್ಸಾಹಧನ ನೀಡಬಹುದು.
4. ಸ್ವಂತ ಜಮೀನು, ನೀರಾವರಿ ಸೌಲಭ್ಯ ಹೊಂದಿದ್ದು, ಹೊಸ ಹಿಪ್ಪುನೇರಳೆ ತಳಿ ನಾಟಿ ಮಾಡುವುದು ಅವಶ್ಯ (ಪಹಣಿ ನೀಡುವುದು).
5. ನವೀಕರಿಸಿದ ರೇಷ್ಮೆ ಹುಳು ಸಾಕಾಣಿಕಾ ಪಾಸ್ ಪುಸ್ತಕ/ರೇಷ್ಮೆ ಕಾರ್ಡ್ ಹೊಂದಿರಬೇಕು.
6. ಹಿಪ್ಪುನೇರಳೆ ನಾಟಿ ಮಾಡಿರುವ ಬಗ್ಗೆ ಇಲಾಖಾಧಿಕಾರಿಗಳು ನಿಗಧಿತ ನಮೂನೆಯಲ್ಲಿ ಮಹಜರು ಮಾಡಿ ಸಲ್ಲಿಸುವುದು.
7. ರೇಷ್ಮೆ ಕೃಷಿಕರು ಹಿಪ್ಪುನೇರಳೆ ನಾಟಿ ಮಾಡಿರುವ ಬಗ್ಗೆ ಇಲಾಖಾಧಿಕಾರಿಗಳು ಪರಿಶೀಲಿಸಿ ಸಹಾಯಧನ ನೀಡುವಂತೆ ಶಿಫಾರಸ್ಸು ಮಾಡಬೇಕು. (ನಿಗಧಿತ ನಮೂನೆ ಲಗತ್ತಿಸಿದೆ).
8. ಸಹಾಯಧನದ ಮೊತ್ತವನ್ನು ನೇರವಾಗಿ ಫಲಾನುಭವಿ ಬ್ಯಾಂಕ್ ಖಾತೆಗೆ ಇ.ಸಿ.ಎಸ್. ಮುಖಾಂತರ ಪಾವತಿಸುವುದು ಬ್ಯಾಂಕ್/ಸಂಘ ಸಂಸ್ಥೆಗಳಿಂದ ಸಾಲ ಪಡೆದಿದ್ದಲ್ಲಿ ಸಹಾಯಧನವನ್ನು ಸಂಬಂಧಿಸಿದ ಬ್ಯಾಂಕ್‌ಗೆ ಕಳುಹಿಸುವುದು.
9. ರೇಷ್ಮೆ ಕೃಷಿಕರು ನಿಗಧಿತ ನಮೂನೆಯಲ್ಲಿ ತಮ್ಮ ವ್ಯಾಪ್ತಿಗೆ ಬರುವ ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳಿಗೆ ಅರ್ಜಿಗಳನ್ನು ಸಲ್ಲಿಸಿ ಸಹಾಯಧನ ಪಡೆಯುವುದು.
10. ಸಹಾಯಧನ ಪಡೆಯುವ ಫಲಾನುಭವಿಯೊಂದಿಗೆ ಇಲಾಖಾ ಸಿಬ್ಬಂದಿ / ಅಧಿಕಾರಿಗಳು ಹಿಪ್ಪುನೇರಳೆ ತೋಟದಲ್ಲಿ ನಿಂತಿರುವ ಛಾಯಾಚಿತ್ರ ತೆಗೆಯಿಸಿ ಸಲ್ಲಿಸಬೇಕು.
11. ಇಲಾಖೆಯು ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿ, ಮಹಜರ್, ಶಿಫಾರಸ್ಸು / ದೃಢೀಕರಣಗಳಿರಬೇಕು.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಘಟಕ ದರ | ಸಹಾಯಧನ | |
|---|---|---|---|---|
| | | | ಸಾಮಾನ್ಯ | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ |
| 1 | ಹಿಪ್ಪುನೇರಳೆ ನಾಟಿ (ಎಕರೆ) | 0.50 | 0.375(75%) | 0.45(90%) |

3. **ರೋಗ ನಿಯಂತ್ರಣ ಕಾರ್ಯಕ್ರಮ :**

ಹಿಪ್ಪುನೇರಳೆ ಮತ್ತು ರೇಷ್ಮೆ ಹುಳುಗಳಿಗೆ ತಗಲುವ ರೋಗ ಮತ್ತು ಕೀಟ ಬಾಧೆಗಳ ನಿಯಂತ್ರಣಕ್ಕಾಗಿ ಸೋಂಕು ನಿವಾರಕಗಳು, ರೋಗ ನಿರೋಧಕಗಳು ಹಾಗೂ ಕೀಟ ನಾಶಕಗಳನ್ನು ವ್ಯವಸ್ಥೆಗೊಳಿಸಿಕೊಳ್ಳಬೇಕು. ದ್ವಿತಳಿ ಸಂಕರಣ ತಳಿ, ಶುದ್ಧ ದ್ವಿತಳಿ, ಮೈಸೂರು ತಳಿಗೆ ಆಧ್ಯತೆ ಮೇರೆಗೆ ಉಪಯೋಗಿಸಿಕೊಳ್ಳುವುದು. ರೇಷ್ಮೆ ನಿರ್ದೇಶನಾಲಯವು ಎಂಪ್ಯಾನಲ್ ಮಾಡಿರುವ ಸಂಸ್ಥೆಗಳಿಂದ ಮಾತ್ರ ನಿಗಧಿಸಿರುವ ಎಲ್1 ದರಗಳ ಅನ್ವಯ ಅವಶ್ಯವಿರುವ ಸಿಂಪರಕಗಳನ್ನು ಪಡೆದು ನಿರ್ವಹಣೆ ಮಾಡಲು ಅನುದಾನ ಒದಗಿಸಿಕೊಳ್ಳುವುದು.

4. **ರೇಷ್ಮೆ ವಸ್ತು ಪ್ರದರ್ಶನ / ಕಾರ್ಯಗಾರ:**

ಜಿಲ್ಲಾ ಮಟ್ಟದ ವಸ್ತು ಪ್ರದರ್ಶನ / ಕಾರ್ಯಗಾರ /ವಿಚಾರ ಸಂಕೀರ್ಣಗಳಿಗಾಗಿ ರೂ.1.00 ಲಕ್ಷಕ್ಕೆ ಮಾತ್ರ ನಿಗದಿ ಪಡಿಸಿದೆ.

ರೈತರನ್ನು ರೇಷ್ಮೆ ಚಟುವಟಿಕೆಗಳ ಬಗ್ಗೆ ತಿಳುವಳಿಕೆ ಮೂಡಿಸಲು ಅಧ್ಯಯನ ಪ್ರವಾಸ ಕೈಗೊಳ್ಳಲು ಅಗತ್ಯಕ್ಕೆ ತಕ್ಕಂತೆ ರೂ.1.00 ಲಕ್ಷದವರೆಗೆ ಅವಕಾಶ ಕಲ್ಪಿಸಿಕೊಳ್ಳುವುದು.

- ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಇಲಾಖಾ ವಸ್ತು ಪ್ರದರ್ಶನಕ್ಕಾಗಿ ನಿಗದಿಪಡಿಸಿದ ಆರ್ಥಿಕ ವಂಟನೆ ರೂ.5.00 ಲಕ್ಷ
- ತುಮಕೂರಿನ ಸಿದ್ದಗಂಗಾ ಜಾತ್ರೆಗೆ ರೂ.1.25 ಲಕ್ಷ
- ಸಿದ್ದರ ಬೆಟ್ಟದ/ ಮಧುಗಿರಿ ಜಾತ್ರೆಗೆ ತಲಾ ರೂ.50,000/–
- ಇತರೆ ಜಿಲ್ಲಾ ಉತ್ಸವಗಳು. ರೂ. 75,000/–

## II. ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು – 2851–00–104–0–61

**ತಾಂತ್ರಿಕ ಸಲಹೆಗಳು ಪ್ರದರ್ಶನಗಳು, ಪ್ರಚಾರ ಶ್ರವಣ ಮತ್ತು ದೃಶ್ಯ ಹಾಗೂ ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರಗಳು:**

ಅ. **ಕ್ಷೇತ್ರೋತ್ಸವಗಳು:** ಹಿಪ್ಪುನೇರಳೆ ತೋಟ ನಿರ್ವಹಣೆ ಹಾಗೂ ರೇಷ್ಮೆ ಹುಳು ಸಾಕಾಣಿಕೆಯಲ್ಲಿ ನೂತನ ತಾಂತ್ರಿಕತೆಗಳನ್ನು ಆಳವಡಿಸಿಕೊಂಡು ಉತ್ತಮ ಗೂಡು ಇಳುವರಿ ಹಾಗೂ ಹೆಚ್ಚಿನ ಆದಾಯ ಪಡೆಯುತ್ತಿರುವ ರೇಷ್ಮೆ ಕೃಷಿಕರ ಅನುಭವಗಳನ್ನು ಇತರೆ ಕೃಷಿಕರು ಹಾಗೂ ಹೊಸದಾಗಿ ರೇಷ್ಮೆ ಕೃಷಿ ಕೈಗೊಳ್ಳುವ ಕೃಷಿಕರು/ನೂಲು ಬಿಚ್ಚಾಣಿಕೆದಾರರು ತಿಳಿದುಕೊಳ್ಳಲು ಕ್ಷೇತ್ರೋತ್ಸವ ಆಚರಿಸುವುದು. ಈ ಕ್ಷೇತ್ರೋತ್ಸವದಲ್ಲಿ ರೇಷ್ಮೆ ಉಪನಿರ್ದೇಶಕರು ಕಡ್ಡಾಯವಾಗಿ ಭಾಗವಹಿಸಬೇಕು, ಪ್ರತಿ ಕ್ಷೇತ್ರೋತ್ಸವದ ವ್ಯವಸ್ಥೆಗಾಗಿ ನಿಗದಿಪಡಿಸಿದ ಆರ್ಥಿಕ ವಂಟನೆ ಗರಿಷ್ಠ ರೂ.5000/–ಮಾತ್ರ ಒದಗಿಸಿಕೊಳ್ಳುವುದು.

ಆ. **ರೇಷ್ಮೆ ವಸ್ತು ಪ್ರದರ್ಶನ / ಕಾರ್ಯಾಗಾರ :** ತಾಲ್ಲೂಕು ಮಟ್ಟದ ವಸ್ತು ಪ್ರದರ್ಶನ / ಕಾರ್ಯಾಗಾರ / ವಿಚಾರ ಸಂಕಿರಣಗಳಿಗಾಗಿ ರೂ.25,000/–ಮಾತ್ರ ಒದಗಿಸಿಕೊಳ್ಳುವುದು.

ಇ. ಹೊಸ ತಾಂತ್ರಿಕತೆಗಳ ಬಗ್ಗೆ ಅವಶ್ಯಕತೆಗೆ ತಕ್ಕಂತೆ ಕರಪತ್ರ, ಇಲಾಖೆಯ ರೇಷ್ಮೆ ಕೃಷಿ ಸಂಚಿಕೆ ಖರೀದಿಗೆ ಸಂಸ್ಥೆಗಳ ಅಜೀವ ಸದಸ್ಯತ್ವ ಮಾಡಿರುವುದು, ಕೈಪಿಡಿಗಳನ್ನು ಮುದ್ರಿಸಿ ರೇಷ್ಮೆ ಕೃಷಿಕರಿಗೆ ಸಕಾಲದಲ್ಲಿ ಜಿಲ್ಲೆಗಳಿಗೆ ಒದಗಿಸಲು ರೂ.25,000/–ವರೆಗೆ ವಂಟನೆ ನಿಗದಿಪಡಿಸಿಕೊಳ್ಳುವುದು.

ಈ. ರೇಷ್ಮೆ ಬೆಳೆಗಾರರಿಗೆ ಮತ್ತು ರೀಲರುಗಳಿಗೆ ತಾಂತ್ರಿಕತೆಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಅಗತ್ಯವಿದೆ. ಇದಕ್ಕಾಗಿ ಪ್ರದರ್ಶನ ಫಲಕಗಳನ್ನು ಕ್ಷೇತ್ರಮಟ್ಟದಲ್ಲಿ ಎಲ್ಲಾ ಸಂಸ್ಥೆಗಳಲ್ಲಿ

ಅದರಲ್ಲೂ ರೈತರು/ರೀಲರುಗಳು ಭೇಟಿ ನೀಡುವ ಪ್ರಾಥಮಿಕ ತಾಂತ್ರಿಕ ಸೇವಾ ಕೇಂದ್ರಗಳಲ್ಲಿ ರೈತ ಸಂಪರ್ಕ ಕೇಂದ್ರಗಳಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಪ್ರದರ್ಶಿಸಿದಲ್ಲಿ ಅವರ ತಾಂತ್ರಿಕ ಅರಿವು ಹೆಚ್ಚಾಗುತ್ತದೆ. ಇದಕ್ಕಾಗಿ ತಾಂತ್ರಿಕ ಸೇವಾ ಕೇಂದ್ರಗಳಲ್ಲಿ ಪಾರದರ್ಶಿಕೆಗಳನ್ನು, ಪ್ರದರ್ಶನ ಚಿತ್ರಗಳನ್ನು ಅಳವಡಿಸಲು ರೂ.25,000/-ವಂಟನೆಯನ್ನು ಒದಗಿಸಿ ಕೊಳ್ಳಬಹುದು.

ಉ. ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರ: ರಾಜ್ಯದ 18 ಜಿಲ್ಲೆಗಳಲ್ಲಿ ಆಯ್ದ ರೇಷ್ಮೆ ಕೃಷಿ ಕ್ಷೇತ್ರಗಳಲ್ಲಿ ಮಹಿಳೆಯರ ಸೌಲಭ್ಯಕ್ಕಾಗಿ ಪ್ರತ್ಯೇಕ ಪ್ರಾತ್ಯಕ್ಷತಾ ಕ್ಷೇತ್ರವನ್ನು ಸ್ಥಾಪಿಸಿದೆ. ಇಲ್ಲಿ ಒಂದು ಎಕರೆ ಹಿಪ್ಪುನೇರಳೆ ತೋಟ ನಿರ್ವಹಣೆ ಹಾಗೂ ಹುಳು ಸಾಕಾಣಿಕೆ ಮಾಡುವುದು ಹಾಗೂ ವಸತಿ ಕೇಂದ್ರದ ನಿರ್ವಹಣೆ ಮಾಡಲು ಅಗತ್ಯ ಆಯವ್ಯಯಗಳನ್ನು ಒದಗಿಸಿಕೊಳ್ಳಬಹುದು. ಜಿಲ್ಲಾ/ತಾಲ್ಲೂಕು ಪಂಚಾಯತ್ ಯೋಜನೆಗಳಡಿ ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆಯಡಿ ಅನುದಾನ ಒದಗಿಸಿದಲ್ಲಿ ಹಿಪ್ಪುನೇರಳೆ ನಾಟಿ ಮಾಡುವ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಕ್ರಮವಹಿಸುವುದು.

## III. <u>ಜಿಲ್ಲಾ ವಲಯ ಯೋಜನೇತರ ಕಾರ್ಯಕ್ರಮ:</u>

ಪ್ರತಿಯೊಂದು ಜಿಲ್ಲೆಯಲ್ಲಿ ಲೆಕ್ಕ ಶೀರ್ಷಿಕೆ 2851–00–107–0–26(ಯೋಜನೇತರ) ಮತ್ತು 2851–00–107–0–28(ಯೋಜನೇತರ) ಅಡಿ ಆಯಾಯ ಜಿಲ್ಲೆಗಳಲ್ಲಿರುವ ಸಿಬ್ಬಂದಿ ಹಾಗೂ ಸಂಸ್ಥೆಗಳ ನಿರ್ವಹಣೆ ವೆಚ್ಚಕ್ಕಾಗಿ ವಂಟನೆಯನ್ನು ಒದಗಿಸಿಕೊಳ್ಳುವುದು.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

1. ಜಿಲ್ಲಾ ಪಂಚಾಯತ್ ಎಲ್ಲಾ ರೇಷ್ಮೆ ಕೃಷಿ ಉಪನಿರ್ದೇಶಕರುಗಳಿಗೆ.
2. ಎಲ್ಲಾ ವಿಭಾಗೀಯ ರೇಷ್ಮೆ ಜಂಟಿ ನಿರ್ದೇಶಕರುಗಳಿಗೆ.
3. ಪ್ರತಿಯನ್ನು ಅಭಿನಂದನೆಗಳೊಂದಿಗೆ ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು(ಜಿಲ್ಲಾ ಪಂಚಾಯತ್) ಇವರ ಮಾಹಿತಿಗಾಗಿ ಕಳುಹಿಸಿದೆ.
4. ಪ್ರತಿಯನ್ನು ಅಭಿನಂದನೆಗಳೊಂದಿಗೆ ನಿರ್ದೇಶಕರು, ಯೋಜನಾ ಇಲಾಖೆ, 7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.